This question paper contains 3 printed page]

**Roll No.** [ | | | | | | | | | | | ]

S. No. of Question Paper : **11447**

Unique Paper Code : **2081001006**

Name of the Paper : **Translation and Interpretation in Kannada**

Name of the Course : **AEC**

Semester : **I**

Duration : **2 Hours** Maximum Marks : **60**

*(Write your Roll No. on the top immediately on receipt of this question paper.)*

I. Answer any TWO Questions in essay 10×2=20

1. 'ಭಾರತದ ಮೊದಲ ಭಾಷಾಂತರ ಬೈಬಲ್' ಈ ಹೇಳಿಕೆಯನ್ನು ವಿವರಿಸಿರಿ.
2. ಭಾಷಾಂತರ ಪ್ರಕಾರವು ಭಾರತದಲ್ಲಿ ಬೆಳೆದು ಬಂದ ಬಗೆಯನ್ನು ವಿವರಿಸಿರಿ.
3. 'ಭಾಷಾಂತರದ ಇತಿಹಾಸವೆಂದರೆ ಧಾರ್ಮಿಕಗ್ರಂಥಗಳ ಇತಿಹಾಸ' ಸಮರ್ಥಿಸಿರಿ
4. ಬೈಬಲಿನ ಅನುವಾದದ ಕುರಿತಾಗಿರುವ ವಿಮರ್ಶಕರ ನಿಲುವನ್ನು ವಿವರಿಸಿರಿ

II. Answer FOUR Questions in Paragraph 5×4=20

1. ಭಾಷಾಂತರ ಮತ್ತು ಲಿಪಿಯಂತರ ಎಂದರೇನು? ಉದಾಹರಣೆ ಸಹಿತ ವಿವರಿಸಿರಿ
2. ಭಾಷೆಯ ಹುಟ್ಟಿನ ಕುರಿತಾಗಿರುವ ಕಲ್ಪಿತಕಥೆಗಳು ಯಾವುವು?
3. ಕನ್ನಡದಲ್ಲಿ ಭಾಷಾಂತರದ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ವಿವರಿಸಿರಿ
4. ಬೈಬಲಿನ ಅನುವಾದದ ಕುರಿತಾಗಿರುವ ಚರ್ಚೆಯನ್ನು ಕುರಿತು ಬರೆಯಿರಿ.

III. Translate any ONE in Kannada to English 5×1=5

1. ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ಗಮನಿಸುದೇ ಆಗಿದ್ದರೆ ಅದಷ್ಟೋ ಪುನರುತ್ಥಾನದ ವಿಚಾರಗಳ ಉಗಮವನ್ನು ನಾವು ಕಾಣುತ್ತೇವೆ. ಪ್ರಮುಖ ವಿಚಾರವೆಂದರೆ, ಪುನರುಜ್ಜೀವನ ಕಾಲದಲ್ಲಿ

P.T.O.

ಶ್ರೀ.ರಾಜಾರಾಮ ಮೋಹನರಾಯರು ಭಾರತದ ಸಮಾಜದಲ್ಲಿನ ಅನಿಷ್ಟ ಪದ್ಧತಿಗಳಾದ ಅಸಮಾನತೆ, ದೌರ್ಜನ್ಯ, ಮಾನಸಿಕ,- ಮತ್ತು ದೈಹಿಕ ಹಿಂಸೆ, ಬಾಲ್ಯವಿವಾಹ, ಬಹುಪತ್ನಿತ್ವ, ಸತಿಪದ್ಧತಿ ಇತ್ಯಾದಿಗಳನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದರು. ನಂತರ ಬಂಗಾಳದ ಈಶ್ವರ ಚಂದ್ರ ವಿದ್ಯಾಸಾಗರ ಅವರು ಚಳುವಳಿಯನ್ನು ಮುಂದುವರಿಸಿದರು. ಹಾಗೂ ೧೮೫೬ra ವಿಧವ ಪುನರ್ವಿವಾಹ ರಚನೆಗೆ ಕಾರಣರಾದರು. ಕರ್ನಾಟಕಧ ಕುದ್ಮಲ್ ರಂಗರಾವ್ ಮತ್ತು ಚಂದಾವರ್ಕರ್. ಆಂಧ್ರ ಪ್ರದೇಶದ ವೀರೇಶಲಿಂಗಂ ಪಂತುಲು ಮಹಾ ರಾಷ್ಟ್ರದ ಜ್ಯೋತಿ ಬಾಪುಲೆ, ಆರ್ ಜಿ ಭಂಡಾರ್ಕರ್ ಮತ್ತು ಡಿ ಕೆ ಕರ್ವೆ ಪ್ರಖ್ಯಾತರು. ಈ ನಿಟ್ಟಿನಲ್ಲಿ ಕುದ್ಮಲ್ ರಂಗರಾವ್ ಇವರ ಸಾದನೆ ಗಣನೀಯವಾಗಿದೆ. ಡಿ ಕೆ ಕರ್ವೆ ಯವರು ಒಬ್ಬ ವಿಧವೆಯನ್ನು ವಿವಾಹವಾಗುದರ ಮೂಲಕ ೧೮೯೯ರಲ್ಲಿ ಪೂನಾದಲ್ಲಿ ಹಿಂದೂ ವಿಡೋಸ್ ಹೋಂ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

2. "ಜನನಿಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸಿ" ಇದು ರಾಮ್ಯಾಯಣದಲ್ಲಿ ನಮ್ಮ ಹುಟ್ಟಿದ ನೆಲದ ಬಗ್ಗೆ ಇರುವ ಅಭಿಮಾನದ ನುಡಿಗಳು. ಭಾರತವು ಪ್ರಜಾಸತ್ತಾತ್ಮಕ ದೇಶವಾಗಿದ್ದು ಅತ್ಯಂತ ದೊಡ್ಡದಾದ ಸಂವಿಧಾನವನ್ನು ಕೂಡ ಹೊಂದಿದೆ. ಸ್ವಾತಂತ್ರ್ಯದ ತರುವಾಯ ಭಾರತ್ತದ ಪಂಚವ್ರಾರ್ಷಿಕ ಯೋಜನೆಗಳೆಲ್ಲಾ ಕೃಷಿಗೆ ಆದ್ಯತೆಯನ್ನು ನೀಡಿತ್ತು . ತದನಂತರ ಸೇವಾ ಸೆಕ್ಟರಿಗೆ ಆದ್ಯತೆ ನೀಡಲಾರಂಬಿಸಿದರು, ಭಾರತವು ಕೃಷಿ ಪ್ರಧಾನ ದೇಶ. ಆದ್ದರಿಂದ ಕೃಷಿಗೆ ಅವಶ್ಯಕವಾದಷ್ಟು ಹಾಗೂ ನಿರಂತರವಾದ ನೀರಿನ ಸರಬರಾಜು ಅತ್ಯಗತ್ಯ. ಭಾರತದ ಕೃಷಿಯು ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ. ಆದರೆ ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನತೆಯಿಂದ ಕೂಡಿದೆ. ಕೆಲವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾಗೂ ನಿರಂತರವಾದ ನೀರಿನ ಪೂರೈಕೆ ಅಗತ್ಯ. ಉದಾ:- ಭತ್ತ, ಕಬ್ಬು ಇತ್ಯಾದಿ. ಜೊತೆಗೆ ಬೆಳೆಗಳ ಅಧಿಕ ಇಳುವರಿ ಮತ್ತು ಉತ್ಪಾದನೆಗಾಗಿಯೂ ನಿರಂತರ ನೀರಿನ ಪೂರೈಕೆ ಅಗತ್ಯ. ಇದು ನೀರಾವರಿಯಿಂದ ಮಾತ್ರ ಸಾಧ್ಯ. ಹೀಗಾಗಿ ಭಾರತಕ್ಕೆ ನೀರಾವರಿ ಸೌಲಭ್ಯ

IV. Translate any ONE in English to Kannada $5\times1=5$

1. The Article 17 of the Indian Constitution prohibits untouchablity. The government of India has implemented untouchablity crime act in 1955. Civil rights protection act was implemented in 1976 with necessary changes to the act of 1955. According to this act, practicing untouchablity is a crime. Universal rights to vote and participation in elections has also been provided. Moreover, reservation has been given in the field of education and employment for scheduled castes and tribes scheduled along with backward classes. The act of 1989 has given some

specific responsibilities for the government in the eradiction of untouchability like this, the independent india had taken special interest in providing equality to all.

2. The labour sector is divided as primary, secondary and teritary sectors. Similarly based on the securities and facilities available. The labour sector is further devided into organised and unorganised sectors. The sector which is enrolled as per the law of the government, and provided fixed wages. Facilities within the framework of law is called organised sector. This sector is guided by minimum wages act, factory act, special allowances act, provident fund act and many other acts in support of labours.

V. Answer all the questions in one-word 1×10=10

1. 'ತರ್ಜುಮೆ' ಇದು ____ ಭಾಷೆಯಿಂದ ಕನ್ನಡಕ್ಕೆ ಬಂದ ಪದ
2. ಕುರಾನನ್ನು ಗಿರೀಶ್ ಚಂದ್ರಸೇನ್ ಅವರು ಯಾವ ಭಾಷೆಗೆ ಭಾಷಾಂತರಿಸಿರುವರು?
3. ಬೈಬಲನ್ನು ಭಾರತೀಯ ಭಾಷೆಗಳಿಗೆ ಭಾಷಾಂತರಿಸಬೇಕು ಎಂಬ ಕನಸು ಹೊತ್ತು ಬಂದ ಮೊದಲ ಪ್ರೊಟೆಸ್ಟೆಂಟ್ ಪಾದ್ರಿ ಯಾರು?
4. 'ಅವಳ ತೊಡುಗೆ ಇವಳಿಗಿಟ್ಟು ನೋಡಬಯಸಿದೆ, ಇವಳ ತೊಡುಗೆ ಅವಳಿಗಿಟ್ಟು ಹಾಡಬಯಸಿದೆ' ಇದು ಬಿ. ಎಂ. ಶ್ರೀ ಯವರ ಸಾಲು (ಸರಿ /ತಪ್ಪು )
5. Version ಎಂದು ಯಾವುದನ್ನು ಕರೆಯುತ್ತಿದ್ದರು?
6. ಕುರಾನಿನ ಮೊದಲ ಮಹಿಳಾ ಭಾಷಾಂತರಕಾರರು ಯಾರು?
7. ಜಗತ್ತಿನಲ್ಲಿ ಅತ್ಯಂತ ಹಳೆಯ ಲಿಖಿತ ಕಾವ್ಯ ಯಾವುದು?
8. 'ಇಂಡೋಲಜಿಯ' ಸ್ಥಾಪಕರು ಯಾರು?
9. 'ಸೆಪ್ಟೆಂಬರ್ ಬೈಬಲ್' ಎಂದು ಪ್ರಸಿದ್ಧವಾದ ಬೈಬಲಿನ ಭಾಷಾಂತರಕಾರರು ಯಾರು?
10. ಬೈಬಲಿನ ಹಳೆಯ ಒಡಂಬಡಿಕೆಯ ಮೂಲ ಭಾಷೆ ಯಾವುದು?